# ಆಹಾ ಸುದ್ದಿ!

★ ಸಸಿತೋಟ



ಟೋಕಿಯೋದಲ್ಲಿ ನಡೆದ ಚಿನ್ನದ ಪ್ರದರ್ಶನದಲ್ಲಿ ಮಾರಾಟಕ್ಕಿಟ್ಟಿದ್ದ ವಧುವಿನ ಚಿನ್ನದ ಉಡುಪು. ಬೆಲೆ 5,60,000 ಡಾಲರ್. ಚಿನ್ನದ ಎಳೆಗಳಿಂದ ಮಾಡಿದ ಈ ಉಡುಪು ಸೇರಿದಂತೆ 130 ದಶಲಕ್ಷ ಡಾಲರ್ ಮೊತ್ತದ ಚಿನ್ನದ ಉತ್ಪನ್ನಗಳನ್ನು ಜಪಾನ್ ಈ ಪ್ರದರ್ಶನದಲ್ಲಿ ಮಾರಾಟ ಮಾಡಿದೆ. ಚಿನ್ನದ ಸಿಂಹಾಸನ, ಚಿನ್ನದ ಕಾಫಿ ಕಪ್, ಚಿನ್ನದ ಚೊಂಬಿನ ಷೋಕಿಯುಳ್ಳವರು ನಮ್ಮಲ್ಲೂ ಇದ್ದು, ಸದ್ಯ ಕಬ್ಬಿಣದ ಕಂಬಿಯ ಸಖ್ಯ ಬೆಳೆಸಿದ್ದಾರೆ.


ಈ ನಾಯಿ ಬೊಗಳಿದರೆ ಕಿವಿಗೆ ಹಿಯರಿಂಗ್ ಏಡ್ ಹಾಕಿಕೊಳ್ಳಬೇಕು. ಶಬ್ದದ ಪ್ರಮಾಣ 113.1 ಡೆಸಿಬೆಲ್ ನಷ್ಟು. ಸಿಡ್ನಿಯ ಗೋಲ್ಡನ್ ರಿಟ್ರೀವರ್ ತಳಿಯ ಈ ನಾಯಿ ಗಿನ್ನೆಸ್ ದಾಖಲೆ ಸೇರಿಕೊಂಡಿದೆ. ಸದ್ಯ ಬೆಂಗಳೂರಿನ ಬಡಾವಣೆಗಳಲ್ಲಿ ರಾತ್ರಿಯ ಶ್ವಾನಗಳ ಆರ್ಕೆಸ್ಟ್ರಾದಲ್ಲಿ ಇಂತಹ ಸಂಗೀತಗಾರರು ಸೇರಿಕೊಂಡಿಲ್ಲವಲ್ಲ!





ಆಸ್ಟ್ರಿಯಾದ ವಿಯೆನ್ನಾದಲ್ಲಿ ಸಲಿಂಗಿಗಳಿಗೆಂದೇ ಹಲವಾರು ಬಾರ್‌ಗಳು, ಬಾರ್‌ನಲ್ಲಿ ಅವರ ಸಂಸ್ಕೃತಿ, ಇತಿಹಾಸದ ಕುರಿತ ಪುಸ್ತಕಗಳು.. ಎಲ್ಲವೂ ಲಭ್ಯವಂತೆ. ಯೂರೋಪ್‌ನ ಹಲವಾರು ದೇಶಗಳಲ್ಲಿ ಆರ್ಥಿಕ ಹಿಂಜರಿತದ ಬಿಸಿಯಿಂದಾಗಿ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆಯಂತೆ. ಆದರೆ ಈ ಬಿಸಿ ಸಲಿಂಗ ಪ್ರವಾಸಿಗರಿಗೆ ತಟ್ಟಿಲ್ಲವಂತೆ. ಸಮೀಕ್ಷೆಯಲ್ಲಿ ಅದಕ್ಕೆ ಕಾರಣವನ್ನು ಮಾತ್ರ ಕೊಟ್ಟಿಲ್ಲ.

ವಾಷಿಂಗ್ಟನ್ನಿನ ಸಿಯಾಟ್ಲ್‌ದಲ್ಲಿ ಕಂಪೆನಿಯೊಂದು ಬೇಕನ್ (ತಿನಿಸು ತಯಾರಿಸಲು ಸಿದ್ಧಗೊಂಡ ಹಂದಿ ಮಾಂಸ) ಪರಿಮಳದ ವಿವಿಧ ಉತ್ಪನ್ನಗಳನ್ನು ತಯಾರಿಸುವುದರಲ್ಲಿ ಎತ್ತಿದ ಕೈ. ಆ ಕಂಪೆನಿ ಈಗ ಎರಡು ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಟ್ಟಿದೆಯಂತೆ. ಬೇಕನ್ ಸುವಾಸನೆ ಹೊಂದಿದ ಸನ್‌ಸ್ಕ್ರೀನ್ ಲೋಶನ್ ಮತ್ತು ಅದೇ ಪರಿಮಳವಿರುವ ಕಾಂಡೋಮ್ಸ್! ಇದುವರೆಗೆ ತಿನಿಸುಗಳನ್ನು ಮಾತ್ರ ತಯಾರಿಸುತ್ತಿದ್ದ ಕಂಪೆನಿ ಉದ್ಯಮವನ್ನು ಈ ರೀತಿ ವಿಸ್ತರಿಸಲು ಹೊರಟಿದ್ದು ವಿರೋಧಿ ಕಂಪೆನಿಗಳ ಮೂಗಿನ ಹೊರಳೆ ಅರಳುವಂತೆ ಮಾಡಿದೆಯಂತೆ!



ಈಗೀಗ ಬೆಂಗಳೂರಿನಲ್ಲೂ ಜಾಗ ಉಳಿತಾಯಕ್ಕೆ ಮನೆಯ ಚಾವಣಿ ಮೇಲೆ ಕಾರ್ ಪಾರ್ಕಿಂಗ್ ಮಾಡುವುದು ಸಾಮಾನ್ಯ. ಆದರೆ ಹೀಗೆ 45 ಡಿಗ್ರಿ ಕೋನದಲ್ಲಿ ಅದ್ಯಾವ ಎಂಜಿನಿಯರ್ ಪಾರ್ಕಿಂಗ್ ಸ್ಥಳ ಕಟ್ಟಿರಬಹುದು ಎಂದು ತಲೆಕೆಡಿಸಿಕೊಳ್ಳುವ ಮುನ್ನ ಪೊಲೀಸರು ಬಂದು ಮಾಲೀಕನ ಸಮೇತ ಕಾರನ್ನೂ ಒಯ್ದಾಗಿದೆ. ಕ್ಯಾಲಿಫೋರ್ನಿಯಾದ ಗ್ಲೆಂಡೇಲ್‌ನಲ್ಲಿ ಕ್ಯಾಡಿಲಾಕ್ ಕಾರು ಚಾಲಕನಿಗೆ ರಸ್ತೆ ಬಿಟ್ಟು ಗಾಳಿಯಲ್ಲಿ ಕಾರು ಹಾರಾಡಿಸುವ ಹುಕಿ ಬಂತು. ಸಣ್ಣ ಗುಡ್ಡದ ಮೇಲೆ ಜಂಪ್ ಹೊಡೆದು ನೇರ ಪಾರ್ಕ್ ಮಾಡಿದ್ದು ಈ ಮನೆಯ ಚಾವಣಿ ಮೇಲೆ.

ಅಮೆರಿಕಾದ ನೆಬ್ರಾಸ್ಕ್‌ದಲ್ಲಿ ಕಟ್ಟಲಾಗಿರುವ ಹೊಸ ಸೆರೆಮನೆಯಲ್ಲಿ ಯಾರು ಬೇಕಾದರೂ ಟ್ರಯಲ್ ನೋಡಬಹುದಂತೆ. 30 ಡಾಲರ್ ಕೊಟ್ಟರೆ ಒಂದು ರಾತ್ರಿ ಅಲ್ಲಿಯ ಕೊಠಡಿಯಲ್ಲಿ ಆರಾಮವಾಗಿ ಕಳೆಯಬಹುದು. ಊಟ, ತಿಂಡಿ, ಜೈಲಿನ ಉಡುಪು, ಜೈಲಿನಲ್ಲಿ ಸೈಟ್ ಸೀಯಿಂಗ್... ಎಲ್ಲವೂ ಲಭ್ಯ. ಭಾವಿ ನಿವಾಸಿಗಳು ಟ್ರಯಲ್ ನೋಡಿಕೊಳ್ಳಬಹುದು.